ಶ್ರೀ ಮೋಹನ್ ಪಿ.ಸಿ.(ಚಿಕ್ಕಪೇಟೆ)114(358)

ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಸೂರ್ಯನಗರ ಹಾಗೂ
ಾಲದಲ್ಲಿ ಕೈಗೆತ್ತಿಕೊಂಡ
..ವೇ ದಿನ ಎರಡು
ಮುಂದೂಡಿರುವುದು ನಿಜವೇ;

2) ಹಾಗಿದ್ದಲ್ಲಿ, ಸೂರ್ಯನಗರದಲ್ಲಿ ಕಾಮಗಾರಿ ಪೂರ್ಣಮುಗಿದಿದ್ದು ಬಂಡೇಮಠದಲ್ಲಿ ಅರ್ಧದಷ್ಟು ಕಾಮಗಾರಿ ಮುಗಿಯದಿರಲು ಕಾರಣವೇನು ತಿಳಿಸುವುದು;

3)ಇದರಿಂದಾಗಿ ಫಲಾನುಭವಿಗಳು ತೊಂದರೆಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

4) ಹಾಗಿದ್ದಲ್ಲಿ, ಬಂಡೇಮಠದ ಕಾಮಗಾರಿ ಯಾವಾಗ ಮುಗಿಯಲಿದೆ ಹಾಗೂ ಇತರ ಸೌಲಭ್ಯವನ್ನು ಯಾವಾಗ ಒದಗಿಸಲಾಗುತ್ತದೆ(ವಿವರ ನೀಡುವುದು)

ಶ್ರೀ ಡಿ.ಟಿ.ಜಯಕುಮಾರ್

1) ಹೌದು, ಕರ್ನಾಟಕ ಗೃಹ ಮಂಡಳಿಯಿಂದ ಸೂರ್ಯನಗರ/ ಬಂಡೇ ಮಠಗಳಲ್ಲಿ ಸಂಯುಕ್ತ ವಸತಿ ಯೋಜನೆಗಳಿಗೆ ದಿನಾಂಕ; 28–08–2006 ರಂದು ಹಂಚಿಕೆಗೆ ಪ್ರಕಟಣೆ ನೀಡಲಾಗಿದೆ.

2) ಬಂಡೇಮಠ ಬಡಾವಣೆಯಲ್ಲಿ ಪ್ರಸ್ತುತ ಶೇಕಡ 80ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ರಸ್ತೆಗಳಿಗೆ ಡಾಂಬರ್ ಹಾಕುವ, ನಿವೇಶನಗಳಿಗೆ ಬೌಂಡರಿ ಕಲ್ಲುಗಳನ್ನು ಹಾಕುವ ಕಾಮಗಾರಿ, ಈ ಬಡಾವಣೆಗೆ ವಿದ್ಯುತ್ ಒದಗಿಸುವ ಕಾಮಗಾರಿಗಳು ಮಾತ್ರ ಬಾಕಿ ಇದ್ದು ಈ ಕೆಲಸಗಳನ್ನು

ಕೂಡ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಡಾವಣೆಯಲ್ಲಿ ಹಂಚಿಕೆ ಪಡೆದ ಹಂಚಿಕೆದಾರರಿಗೆ ಕೊನೆಯ ಕಂತು ಪಾವತಿಗಾಗಿ ಅಕ್ಟೋಬರ್ 2007 ರವರೆಗೆ ನಿಗದಿತ ಕಾಲಾವಧಿ ಇರುವುದರಿಂದ ಹಂಚಿಕೆದಾರರು ಮಂಡಳಿಗೆ ಸ್ವತ್ತಿನ ಪೂರ್ತಿ ಹಣ ಪಾವತಿಸಿದ ನಂತರ ಹಂಚಿಕೆದಾರರಿಗೆ ನಿವೇಶನಗಳನ್ನು/ಮನೆಗಳನ್ನು ಸ್ವಾಧೀನ ನೀಡಲಾಗುವುದು. ಆದಷ್ಟು ಬೇಗನೆ ಮಂಡಳಿಯ ಬಡಾವಣೆಗೆ ಮಾಡಬೇಕಾದ ಎಲ್ಲಾ ಮೂಲ ಭೂತ ಸೌಕರ್ಯಗಳ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು.

3) ಹಂಚಿಕೆದಾರರಿಗೆ ಮಂಡಳಿಯ ಸ್ವತ್ತನ್ನು ಇನ್ನು ಸ್ವಾಧೀನ ನೀಡದೇ ಇರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ, ಸದರಿ ವಿಚಾರವಾಗಿ ಹಂಚಿಕೆದಾರರು ತೊಂದರೆಗೆ ಸಿಲುಕಿರುವುದು ಕೂಡ ಮಂಡಳಿಗೆ ದೂರುಗಳು ಬಂದಿರುವುದಿಲ್ಲ.

4) ಕ್ರಮ ಸಂಖ್ಯೆ:2 ರಲ್ಲಿ ವಿವರಿಸಿರುವಂತೆ ಮೂಲ ಸೌಲಭ್ಯಗಳಾದ ರಸ್ತೆ, ವಿದ್ಯುಚ್ಚಕ್ತಿ, ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಗಳ ಸೌಲಭ್ಯಗಳೊಂದಿಗೆ ಸುಮಾರು ಆರು ತಿಂಗಳೊಳಗಾಗಿ ಒದಗಿಸಲಾಗುವುದು.